**ದಿನಾಂಕಃ 02-08-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ಮತ್ತು 4 ನೇ ಪ್ರತಿವಾದಿಯರ ಪರ ಶ್ರೀ ಎಂ.ಬಿ.ಹೆಚ್. ವಕೀಲರಿಂದಃ**

ನನ್ನ ಜನ್ಮ ದಿನಾಂಕಃ 16.10.1975 ಇರುತ್ತದೆ. ದಿನಾಂಕಃ 11.01.1966 ರಂದು ವಾಟ್ನಿ ಆಗಿದೆ ಎಂದು ವಾದ ಪತ್ರದಲ್ಲಿ ಬರೆಯಿಸಿದ್ದು ಸದರಿ ವಾಟ್ನಿ ಯಾವ ರೀತಿಯಾಗಿ ಆಗಿರುತ್ತದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ. ಸದರಿ ವಾಟ್ನಿ ಆಧಾರದ ಮೇಲೆ ಮಂಜೂರಾದ ಮುಟೇಶನನ್ನು ನಾವು ಈವರೆಗೂ ಪ್ರಶ್ನಿಸಿಲ್ಲ. 1966 ರಿಂದ ಈವರೆಗೂ ಸಹ ಸದರಿ 1966 ರಲ್ಲಿ ಆದ ವಾಟ್ನಿ ಅನ್ವಯ ಅವರವರ ಹೆಸರು ದಾಖಲಾಗಿ ಮುಂದುವರೆದಿವೆ ಎಂದರೆ ಸರಿ.

2. 1974 ರಲ್ಲಿ ದಾವಾ ಆಸ್ತಿ ನಂ. 6 ರಿಂದ 8 ನೇದ್ದವುಗಳನ್ನು ಮನೆತನದ ಸಾಲ ತೀರಿಸುವ ಉದ್ದೇಶದಿಂದ 2 ನೇ ಪ್ರತಿವಾದಿಗೆ ನೀಡಲಾಯಿತು ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿ ನಂ. 6 ರಿಂದ 8 ರ ಉತಾರಗಳಲ್ಲಿ 1974 ರಿಂದ 2000 ನೇ ಇಸವಿವರೆಗೆ 2 ನೇ ಪ್ರತಿವಾದಿಯ ಹೆಸರು ಸದರಿ ಆಸ್ತಿಗಳಿಗೆ ಮುಂದುವರೆದವು ಎಂದರೆ ಸರಿ. ಹಾಗೂ ಸದರಿ ಆಸ್ತಿಗಳ 2001 ರಿಂದ 2016 ನೇ ಇಸವಿವರೆಗೆ ಉತಾರಗಳಲ್ಲಿ 2 ನೇ ಪ್ರತಿವಾದಿಯ ಹೆಸರು ಮುಂದುವರೆದಿದೆ ಎಂದರೆ ಸರಿ. ಹಾಗೂ ಸದರಿ 3 ಜಮೀನುಗಳ 2016 ರಿಂದ ಈವರೆಗಿನ ಉತಾರಗಳಲ್ಲಿ 3 ಮತ್ತು 4 ನೇ ಪ್ರತಿವಾದಿಯ ಹೆಸರು ಮುಂದುವರೆದಿವೆ ಎಂದರೆ ಸಾಕ್ಷಿ 1 ಮತ್ತು 2 ನೇ ಪ್ರತಿವಾದಿಯರು ಸದರಿ ಆಸ್ತಿಗಳನ್ನು ಖರೀದಿ ನೀಡಿದ್ದರಿಂದ ಮುಂದುವರೆದಿವೆ ಎನ್ನುತ್ತಾರೆ.

3. ಸದರಿ ದಾವಾ ಆಸ್ತಿ ಅನುಕ್ರಮ 6 ರಿಂದ 8 ನೇ ಆಸ್ತಿಗಳನ್ನು 1974 ರಲ್ಲಿ 2 ನೇ ಪ್ರತಿವಾದಿಯ ಹಿಸ್ಸೆಗೆ ನೀಡಿದರನ್ವಯ ಡ ಸಂಖ್ಯೆ 4893 ಮಂಜೂರಾಗಿ ಆತನ ಹೆಸರು ದಾಖಲಾಗಿದೆ ಎಂದರೆ ಸರಿ. ಸದರಿ ಡ-4893 ನ್ನು ನಾನಾಗಲಿ ಅಥವಾ ನನ್ನ

ತಾಯಿಯಾಗಲಿ ಈವರೆಗೂ ಪ್ರಶ್ನಿಸಿಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿ 6 ರಿಂದ 8 ನೇದ್ದವುಗಳನ್ನು 2 ನೇ ಪ್ರತಿವಾದಿ ತನ್ನ ಮನೆತನದ ಸಾಲ ತೀರಿಸುವುದಕ್ಕಾಗಿ 3 ಮತ್ತು 4 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ.

4. ಸಾಲ ಇದ್ದರೆ ಮಾತ್ರ ಪಹಣಿ ಪತ್ರಿಕೆಯಲ್ಲಿ ಬೋಜ ಕೂರಿಸುತ್ತಾರೆ ಎಂದರೆ ಸರಿ. ನಿಪಿ-6 ರಿಂದ 8 ಉತಾರಗಳಲ್ಲಿ ಕೆವಿಜಿ ಬ್ಯಾಂಕ್ ಕದರಮಂಡಲಗಿ ಶಾಖೆಯ ಬೋಜಾ ನಮೂದಿದೆ ಎಂದರೆ ಸಾಕ್ಷಿ ನನ್ನ ಗಮನಕ್ಕೆ ಬಂದಿಲ್ಲ ಎನ್ನುತ್ತಾರೆ. ಸದರಿ ನಿಪಿ-6 ರಿಂದ 8 ಜಮೀನುಗಳ ಮೇಲೆ ಸಾಲ ಪಡೆದಿದ್ದರಿಂದ ಬೋಜಾ ದಾಖಲಿಸಲಾಗಿದೆ ಎಂದರೆ ಸರಿ. 2014 ನೇ ಸಾಲಿನಲ್ಲಿ 2 ನೇ ಪ್ರತಿವಾದಿ ತನ್ನ ಮನೆತನದ ಅಡಚಣೆಗಾಗಿ ಹಾಗೂ ಬ್ಯಾಂಕಿನಲ್ಲಿ ಮಾಡಿದ ಸಾಲ ತೀರಿಸುವುದಕ್ಕಾಗಿ ಅನುಕ್ರಮ ಸಂಖ್ಯೆ6 ನೇ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖರೀದಿ ಕೊಟ್ಟಿರುವುದು ನಿಜ ಆದರೆ ಸಾಲ ಇರಲಿಲ್ಲ ಎನ್ನುತ್ತಾರೆ. ಅದೇರೀತಿ ದಾವಾ ಅನುಕ್ರಮ ನಂ8 ನೇ ಜಮೀನನ್ನು 3 ನೇ ಪ್ರತಿವಾದಿಗೆ 2 ನೇ ಪ್ರತಿವಾದಿ ತನ್ನ ಮನೆತನದ ಅಡಚಣೆಗಾಗಿ ಹಾಗೂ ಬ್ಯಾಂಕಿನಲ್ಲಿ ಮಾಡಿದ ಸಾಲ ತೀರಿಸುವುದಕ್ಕಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾರಾಟ ಮಾಡಿರುವುದು ಸರಿ ಆದರೆ ಸಾಲ ಇರಲಿಲ್ಲ ಎನ್ನುತ್ತಾರೆ.

5. ಸದರಿ ದಾವಾ ಆಸ್ತಿ ಅನುಕ್ರಮ ಸಂಖ್ಯೆ6 ರಿಂದ 8 ರ ಮೇಲೆ ಮಾಡಿರುವ ಸಾಲವನ್ನು ಸದರಿ ಅನುಕ್ರಮ ಸಂಖ್ಯೆ 6 ಮತ್ತು 8 ನೇ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ತೀರಿಸಿರುತ್ತಾರೆ ಎಂದರೆ ಸರಿ. ಸದರಿ ಜಮೀನುಗಳನ್ನು 3 ಮತ್ತು 4 ನೇ ಪ್ರತಿವಾದಿ ಖರೀದಿಸಿದ ದಿನದಿಂದ ಅವರು ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ಆ ಬಗ್ಗೆ ನನ್ನ ತಾಯಿ ನನಗೆ ಹೇಳಿದ್ದರೂ ಸಹ ಸದರಿ ವಿಷಯಗಳು ನನಗೆ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1974 ರಿಂದ ಸದರಿ ದಾವಾ 6 ರಿಂದ 8 ನೇ ಅನುಕ್ರಮದ ಆಸ್ತಿಗಳನ್ನು 2 ನೇ ಪ್ರತಿವಾದಿ 2016 ರವರೆಗೆ ಸ್ವಂತ

ಮಾಲ್ಕಿನಾತೆಯಿಂದ ವಹಿವಾಟು ಮಾಡಿಕೊಂಡು ಬಂದಿದ್ದು ಆನಂತರ 3 ಮತ್ತು 4 ನೇ ಪ್ರತಿವಾದಿಗಳು ಸದರಿ ಜಮೀನುಗಳನ್ನು ಖರೀದಿಸಿ ತಾವು ಮಾಲ್ಕಿನಾತೆಯಿಂದ ವಹಿವಾಟಿ ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದಂತೆ ವಹಿವಾಟು ಮಾಡಿಕೊಂಡು ಬಂದಿರುತ್ತಾರೆ ಎನ್ನುತ್ತಾರೆ. ಸದರಿ 6 ರಿಂದ 8 ನೇ ಆಸ್ತಿಗಳನ್ನು ನಾವು ಯಾವತ್ತೂ ಸಾಗುವಳಿ ಮಾಡಿಲ್ಲ ಎಂದರೆ ಸರಿ. ಸದರಿ ಜಮೀನುಗಳನ್ನು ನಾವು ಸಾಗುವಳಿ ಸಾಮೂಹಿಕವಾಗಿ ಮಾಡದೇ ಇದ್ದುದ್ದರಿಂದ ನಾವು ಸರಿಯಾದ ನ್ಯಾಯಾಲಯದ ಶುಲ್ಕ ತುಂಬಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಾವು ಪಹಣಿ ಪತ್ರಿಕೆ ಬಿಟ್ಟರೆ ಬೇರೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸದರಿ ದಾವಾ ಸ್ವತ್ತುಗಳು ಯಾರಿಂದ ಯಾರಿಗೆ ಯಾವ ರೀತಿಯಲ್ಲಿ ಬಂದಿರುತ್ತವೆ ಎಂದು ತೋರಿಸುವ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ.

6. ಸದರಿ 2 ನೇ ಪ್ರತಿವಾದಿಗೆ 3 ಮತ್ತು 4 ನೇ ಪ್ರತಿವಾದಿಯರು ಸದರಿ ಸ್ವತ್ತುಗಳನ್ನು ಖರೀದಿ ಪಡೆಯುವ ಕಾಲಕ್ಕೆ 2 ನೇ ಪ್ರತಿವಾದಿಯ ಸಹೋದರಿಯರ ಸಹಿಯನ್ನು ಮಾಡಿಸುವಂತೆ ಕೇಳಿಕೊಂಡಾಗ 2 ನೇ ಪ್ರತಿವಾದಿ ನಾವು 1974 ನೇ ಸಾಲಿನಲ್ಲಿಯೇ ವಾಟ್ನಿ ಮಾಡಿಕೊಂಡಿದ್ದು ನಮ್ಮ ಸಹೋದರಿಯರಿಗೆ ಅಂದರೆ ವಾದಿಯರಿಗೆ ತಲಾ 30 ತೋಲೆ ಬಂಗಾರ ಹಾಗೂ 2 ಲಕ್ಷ ರೂಪಾಯಿಗಳನ್ನು ನೀಡಿರುತ್ತೇವೆ ಎಂದು ತಿಳಿಸಿದ ಮೇರೆಗೆ ಸದರಿ 3 ಮತ್ತು 4 ನೇ ಪ್ರತಿವಾದಿ ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಹಾಗೂ 2 ನೇ ಪ್ರತಿವಾದಿ ಸದರಿಯವರ 3 ಮತ್ತು 4 ನೇ ಪ್ರತಿವಾದಿಯರಿಗೆ ಡ-4893 ನ್ನು ತೋರಿಸಿ ಮನದಟ್ಟು ಮಾಡಿಸಿದ್ದರಿಂದ ಸದರಿಯವರು ಸದರಿ ಜಮೀನುಗಳನ್ನು ಖರೀದಿ ಪಡೆದರು ಎಂದರೆ ಸರಿಯಲ್ಲ. ವಾದಿಯರು ಸದರಿ ತಮ್ಮ ಹಿಸ್ಸೆಯ ಬಾಬ್ತು ಬಂಗಾರ ಮತ್ತು ಹಣ ಪಡೆದ ವಿಷಯ ನನಗೆ ಹಾಗೂ ನನ್ನ ತಾಯಿಗೆ ಗೊತ್ತಿದ್ದರೂ ಸಹ ಸದರಿ ವಾದಿಯರು ಸಾಕ್ಷಿ ನುಡಿಯಲು ಬಂದರೆ ಆ ಬಗ್ಗೆ ಸತ್ಯ ಹೊರಬರುತ್ತದೆ ಎಂದು ತಿಳಿದು ನಾನು ನನ್ನ ತಾಯಿ ಹಾಗೂ ನನ್ನ ದೊಡ್ಡಮ್ಮಳಿಂದ ಒಟ್ಟು ಮುಕ್ತಿಯಾರ ಪತ್ರವನ್ನು ಖೊಟ್ಟಿ ರೀತಿಯಿಂದ ಬರೆಯಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. 1 ಮತ್ತು 2 ನೇ ಪ್ರತಿವಾದಿಯರಿಗೆ ದಾವಾ ಸ್ವತ್ತು ಅನುಕ್ರಮ ಸಂಖ್ಯೆ6 ರಿಂದ 8 ಬಿಟ್ಟು ಬೇರೆ ಸಾಕಷ್ಟು ಆಸ್ತಿಗಳು ಇವೆ ಎಂದರೆ ಸರಿ. ಸದರಿ 3 ಮತ್ತು 4 ನೇ ಪ್ರತಿವಾದಿಯರು ಕಾನೂನು ಬದ್ಧವಾಗಿ ಸದರಿ ಜಮೀನುಗಳನ್ನು ಖರೀದಿಸಿರುವ ವಿಷಯ ನನಗೆ ಗೊತ್ತಿದ್ದು ಹಾಗೂ ಸದರಿ ಜಮೀನುಗಳಲ್ಲಿ ನಮಗೆ ಹಿಸ್ಸೆ ಸಿಗುವುದಿಲ್ಲ ಎಂದು ನನಗೆ ತಿಳಿದಿದ್ದರೂ ಸಹ ಸದರಿಯವರನ್ನು ವಿನಾಃ ಕಾರಣ ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಹಾಗೂ ಸದರಿಯವರೆಗೆ ತೊಂದರೆ ನೀಡುವ ಉದ್ದೇಶಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.